ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.— ಹಿಂದಿನ ವರ್ಷ ಕೊಡುತ್ತೇವೆಂದು ಹೇಳಿದಿರಿ. ತಮ್ಮ ಮಾತನ್ನು ಈ ಸಾರಿಯಾದರೂ ನಡೆಸಿಕೊಡುತ್ತೀರಾ ?

ಡಾ॥ ಆರ್. ನಾಗನಗೌಡ —ಈಗಾಗಲೆ ಬೆಂಗಳೂರು ಜಿಲ್ಲೆಯಲ್ಲಿ ಮೂರು ತಾಲ್ಲೂಕುಗಳಿಗೆ ಕೊಟ್ಟಿದೆ, ಇತರ ಅನೇಕ ಜಿಲ್ಲೆಗಳಲ್ಲಿ ಎರಡು ತಾಲ್ಲೂಕುಗಳಿಗೆ ಮಾತ್ರ ಕೊಟ್ಟಿದೆ. ಆದ್ದರಿಂದ ಬೆಂಗಳೂರಿಗೆ ಮೊದಲೇ ಹೆಚ್ಚು ರಿಯಾಯಿತಿ ತೋರಿಸಿರುವುದರಿಂದ ಈಗ ಸದ್ಯಕ್ಕೆ ಆ ಜಿಲ್ಲೆಗಳಿಗೆ ಹೆಚ್ಚು ಕೊಡಲು ಸಾಧ್ಯವಿಲ್ಲ. ಮುಂದಿನ ಸಲ ಅವಕಾಶ ಬಂದಾಗ ತಾವು ಹೇಳುವುದನ್ನು ಯೋಚನೆ ಮಾಡುತ್ತೇವೆ.

---

## Second Five-Year Plan (Improvement of Amrit Mahal Cattle.)

*Q.*— 298. Sri B. HUTCHE GOWDA (Turuvekere).—

Will the Government be pleased to state :—

(*a*) whether a scheme for the improvement of the Amrit Mahal Cattle under the Second Five-Year Plan has not been received from the Veterinary Department ;

(*b*) whether it is not a fact that these cattle are being reared in forests without shed or shelter facilities being provided as in the case of other breed of cattles so as to make them fit for agriculture and other kind of strenuous work ;

(*c*) what steps they have taken under the next Five-Year Plan to grow good grass and provide water facilities for cattle ?

*A.*—Dr. R. NAGAN GOWDA (Minister for Agriculture).—

(*a*) Yes.

(*b*) Yes.

(*c*) Since there are enough area of Kaval lands for the exclusive use of these animals no special provision was considered necessary under Second Five-Year Plan.

ಶ್ರೀ ಬಿ. ಹುಚ್ಚೇಗೌಡ.—ಈಗ ಬೇಕಾದಷ್ಟು ಹುಲ್ಲುಗಾವಲಿರುವುದರಿಂದ ಅದನ್ನು ಅಭಿವೃದ್ಧಿಪಡಿಸಬೇಕಾದ ಅವಶ್ಯಕತೆಯಿಲ್ಲವೆಂದು ಹೇಳಿದ್ದಾರೆ. ಆ ಹುಲ್ಲುಗಾವಲನಲ್ಲಿ ಮುಳ್ಳು ಬೆಳೆದಿರುವುದರಿಂದ, ಕಲ್ಲುಪ್ರದೇಶವಿರುವುದರಿಂದ ಹುಲ್ಲು ಬೆಳೆಯದಿರುವ ಜಮೀನು ಜಾಸ್ತಿ ಇಲ್ಲವೆ ?

*ಡಾ॥ ಆರ್. ನಾಗನಗೌಡ.—ಉಂಟು, ನಿಜ. ಈಗ ಆ ಹುಲ್ಲುಗಾವಲನ್ನು ಅಭಿವೃದ್ಧಿಮಾಡಬಾರದೆಂಬುದು ನಮ್ಮ ಉದ್ದೇಶವಲ್ಲ. ಅದನ್ನು ಅಭಿವೃದ್ಧಿಪಡಿಸಬೇಕೆಂದು ದ್ವಿತೀಯ ಪಂಚವಾರ್ಷಿಕ ಯೋಜನೆ ಪ್ರೋಗ್ರಾಂ ಕಳುಹಿಸುವಾಗ ನಾವು ಅಡಕಮಾಡಿ ಇಂಡಿಯಾ ಗವರ್ನರಿಗೆ ತಿಳಿಸಿದ್ದೆವು. ಪಾನ್ಸರ್ ಡೆವಲಪ್‌ಮೆಂಟಿಗಾಗಿ 2 ಲಕ್ಷ 86 ಸಾವಿರ ರೂಪಾಯಿಗಳವರೆಗೆ ಕೊಟ್ಟಿತ್ತು. ಈ ವರ್ಷ ಖರ್ಚು ಹೆಚ್ಚಿ ಡ್ರಾಪ್ ಮಾಡಬೇಕಾಯಿತು. ಸಾಯಿಲ್ ಎರೋಷನ್ ಈ ಕಾವಲುಗಳಲ್ಲಿ ಆಯಿತು. ಈ ಪ್ಯಾಟ್ಲಿಂ ಟ್ಯಾಕರ್ ಮಾಡುವುದು ಬಹಳ ಕಷ್ಟ, ಸಾಯಿಲ್ ಕನ್‌ಸರ್ವೇಷನ್ ಎಂದು ಒಂದು ದೊಡ್ಡ ಸ್ಕೀಂ 85 ಲಕ್ಷಕ್ಕೆ ಹಾಕಿದ್ದೆವು. ಸಾಧ್ಯವಾದರೆ ಬಿಟ್ಟಿರುವ ಪ್ರದೇಶವನ್ನು ತೆಗೆದು ಕೊಂಡರೂ ತೆಗೆದುಕೊಳ್ಳುತ್ತೇವೆ. ನಿರ್ದಿಷ್ಟವಾಗಿ ಇಂಥದನ್ನೇ ತೆಗೆದುಕೊಳ್ಳಬೇಕೆಂದು ಅಂದುಕೊಂಡಿಲ್ಲ.

ಶ್ರೀ ಬಿ. ಹುಚ್ಚೇಗೌಡ.—(*c*) ಪ್ರಶ್ನೆಗೆ ಉತ್ತರವಾಗಿ ಅವಶ್ಯಕತೆಯಿಲ್ಲವೆಂದು ಹೇಳಲಾಗಿದೆ. ಒಟ್ಟಿನಲ್ಲಿ ಒಂದುವೇಳೆ ಹುಲ್ಲುಗಾವಲು ಜಾಸ್ತಿಯಿದ್ದರೂ ಕೂಡ ಅದನ್ನು ಅಭಿವೃದ್ಧಿಪಡಿಸದೆ ಅದರಲ್ಲಿ ಅರ್ಧದಿಂದರೇ ಸಾಕಾದಷ್ಟು ಮೇವು ಒದಗುತ್ತದೆಯೆಂಬುದು ತಮ್ಮ ಅಭಿಪ್ರಾಯವೆ ?

ಡಾ॥ ಆರ್. ನಾಗನಗೌಡ.—ನಿಜ, ಈಗ ಡೆವಲಪ್ ಮಾಡಿದರೆ ಅಷ್ಟೇ ಸಾಕು, ಅದರಲ್ಲೆ ಈಗ ಮೇಯುತ್ತಿರುವ ದನಗಳ ಎರಡರಷ್ಟು ದನಗಳು ಮೇಯಬಹುದು. ಈಗ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಯಿಲ್ ಕನ್‌ಸರ್ವೇಷನ್‌ಗೆ ಮೊದಲು ಹಣ ಒದಗಿಸಬೇಕಾಗಿರುವುದರಿಂದ ಅಭಿವೃದ್ಧಿ ಮಾಡಲು ಸ್ವಲ್ಪ ತೊಂದರೆಯಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಇಲಾಖೆಯವರು ಕಳುಹಿಸಿರುವ ಅವಶ್ಯತೆಗಳಪಟ್ಟಿಗನುಸಾರವಾಗಿ ಏರ್ಪಾಡು ಮಾಡಿದೆಯೆ ?

ಡಾ॥ ಆರ್. ನಾಗನಗೌಡ.—ಒಂದು ಸ್ಕೀಂ ಕಳುಹಿಸಿದ್ದಾರೆ. ಈಗಿರುವ ಫಂಡಿನಲ್ಲಿ ಡೆವಲಪ್‌ಮೆಂಟ್ ಎಷ್ಟು ಮಾಡಲು ಸಾಧ್ಯವೋ ಅಷ್ಟಕ್ಕೆ ಏರ್ಪಾಡು ಮಾಡಿದ್ದೇವೆ. ಅವರ ಪೂರ್ಣ ಪ್ರೋಗ್ರಾಂ ಈಗ ಅನುಸರಿಸಲು ಸಾಧ್ಯವಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಉತ್ತಮವಾದ ಹುಲ್ಲು ಬೆಳೆಯುವುದಕ್ಕೆ ಡೆಮಾರ್ಕೆಷನ್ ಫಾರಂ ಆದರೂ ಪ್ರಾರಂಭಿಸಲು ಯೋಚನೆ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಈಗ ಹೆಸರುಘಟ್ಟ ಮತ್ತು ಅಜ್ಜಂಪುರದಲ್ಲಿ ಹುಲ್ಲು ಚೆನ್ನಾಗಿ ಬೆಳೆಯಲು ಎಕ್ಸ್‌ಪೆರಿಮೆಂಟ್ ಮಾಡುತ್ತಿದೆ. ತಾವು ಹೇಳಿದ ಹಾಗೆ ಡೆಮಾರ್ಕೆಷನ್ ಮಾಡುವುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇರತಕ್ಕ ಫಾರಂಗಳಲ್ಲಿ ಮಾಡುವುದಲ್ಲದೆ ಹಳ್ಳಿಗಾಡಿನ ಕಡೆ ಪ್ರೈವೇಟ್ ಲ್ಯಾಂಡ್ ತೆಗೆದುಕೊಂಡು ಡೆಮಾರ್ಕೆಟ್ ಮಾಡುವುದು ಅವಶ್ಯಕವಲ್ಲವೆ ?

Mr. SPEAKER.—Have not the Government taken this up in the N.E.S. Blocks and in the Community Project areas ?

Dr. R. NAGAN GOWDA.—Not in the Community Project area. But it is a proper subject both for the N.E.S. and Community Project.

---